ಅದಕ್ಕೋಸ್ಕರ ಈ ಪ್ರಶ್ನೆಯನ್ನು ಹಾಕಿದ್ದೇನೆ. ದಯವಿಟ್ಟು ಇದಕ್ಕೆ ಯಾವ ರೀತಿ ರಿಲ್ಯಾಕ್ಸ್ ಮಾಡುತ್ತೀರಿ ಎಂದು ಹೇಳಬೇಕು.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

(ಶ್ರೀ ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಇದರ ಪರವಾಗಿ): ಮಾನ್ಯ ಅಧ್ಯಕ್ಷರೆ, ಇದರಲ್ಲಿ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿರ ತಕ್ಕಂಥ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸಿಕೊಡುತ್ತೇನೆ.

9. ವಿಷಯ : ಪೂನಾ ಬೆಂಗಳೂರು ರಾಜ್ಯ ಹೆದ್ದಾರಿಯ ಹುಬ್ಬಳ್ಳಿ ಮುಖ್ಯ ದ್ವಾರದಲ್ಲಿ ಕಾನೂನು ಬಾಹಿರವಾಗಿ ಕಟ್ಟಡಗಳನ್ನು ನಿರ್ಮಿಸಿರುವ ಬಗ್ಗೆ.

ಶ್ರೀ ಪ್ರಸಾದ್ ಅಬ್ಬಯ್ಯ (ಹುಬ್ಬಳ್ಳಿ–ಧಾರವಾಡ–ಪೂರ್ವ): ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ನಗರದ ಬಿ.ಬಿ.ರೋಡ್, ಮುನಸೋಳಿ ಲಕ್ಷ್ಮೇಶ್ವರ ರಾಜ್ಯ ಹೆದ್ದಾರಿ–73 ಮುಖ್ಯ ರಸ್ತೆಯ ಮುಖ್ಯ ದ್ವಾರದಲ್ಲಿ ಕಾನೂನು ಬಾಹಿರವಾಗಿ ವಾಣಿಜ್ಯ ವ್ಯಾಪಾರ ದೃಷ್ಟಿಯಿಂದ ತಾತ್ಕಾಲಿಕ ಶೆಡಗಳು ಎಂದರೆ ಡಾಬಾ ಅಂಗಡಿ, ಹೊಟೇಲ್‌ಗಳನ್ನು ಮತ್ತು ಕೆಲವು ಆರ್‌ಸಿಸಿ ಕಟ್ಟಡಗಳನ್ನು ನಿರ್ಮಾಣ ಮಾಡಿರುವುದರಿಂದ ನಗರ ಸೌಂದರ್ಯಕ್ಕೆ ಧಕ್ಕೆಯಾಗಿರುತ್ತದೆ. ಈ ಸ್ಥಳ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವುದರಿಂದ ನಾನು ಅನೇಕ ಬಾರಿ ಮಹಾನಗರ ಪಾಲಿಕೆಯ ಅಧಿಕಾರಗಳ ಗಮನಕ್ಕೆ ತಂದಿದ್ದೇನೆ. ಅಲ್ಲಿಗೆ ಕಮಿಷನರ್‌ರವರನ್ನು ಕೂಡ ಕರೆದುಕೊಂಡು ಹೋಗಿ ಭೇಟಿ ಮಾಡಿಸಿದ್ದೇನೆ. ಅದಲ್ಲದೆ ಜಿಲ್ಲಾಧಿಕಾರಿಗಳು ಮತ್ತು ಉಸ್ತುವಾರಿ ಸಚಿವರ ಗಮನಕ್ಕೆ ಕೂಡ ತೆಗೆದುಕೊಂಡು ಬಂದಿದ್ದೇನೆ. ಅವರೂ ಕೂಡ ಆದೇಶ ಮಾಡಿದ್ದಾರೆ. ಆದರೂ ಕೂಡ ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಅದಕ್ಕಾಗಿ ಇದರ ಬಗ್ಗೆ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತಾರೆಂದು ತಿಳಿಸಬೇಕು.

ಶ್ರೀ ವಿನಯ ಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಪ್ರಸಾದ್ ಅಬ್ಬಯ್ಯ, ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಚಾರದಲ್ಲಿ ಹೇಳುವುದಾದರೆ (ಪೂನಾ–ಬೆಂಗಳೂರು) ಮುನಸೂಳಿ–ಲಕ್ಷ್ಮೀಶರ ರಾಜ್ಯ ಹೆದ್ದಾರಿ–73ರ ಮುಖ್ಯ ರಸ್ತೆಯಲ್ಲಿ ಅನಧಿಕೃತವಾಗಿ ತಾತ್ಕಾಲಿಕ ಶೆಡ್ ಹಾಗೂ ಆರ್‌ಸಿಸಿ ಕಟ್ಟಡಗಳನ್ನು ತೆರವುಗೊಳಿಸುವ ಕುರಿತಂತೆ ಪರಿಶೀಲಿಸಲಾಗಿದೆ, ಈ ಜಾಗವು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ವಿದ್ಯಾಗಿರಿ, ಧಾರವಾಡ ಇವರ ವ್ಯಾಪ್ತಿಯಲ್ಲಿ ಬರುವುದಾಗಿ ತಿಳಿದುಬಂದಿರುತ್ತದೆ. ಈ ಕುರಿತಂತೆ ಯೋಜನಾ ನಿರ್ದೇಶಕರು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ವಿದ್ಯಾಗಿರಿ, ಧಾರವಾಡ ಇವರೊಂದಿಗೆ ಪತ್ರ ವ್ಯವಹಾರ ನಡೆಸಲಾಗಿದ್ದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ಪಾಲಿಕೆಯಿಂದ ಜಂಟಿಯಾಗಿ ನಗರ ಭೂಮಾಪಕರಿಂದ ಮೋಜಣಿಯನ್ನು ಮಾಡಿ ಹದ್ದುಬಸ್ತು ಗುರುತಿಸಿ ಅಗತ್ಯ ಕ್ರಮ ವಹಿಸಲಾಗುವುದು.

10. ವಿಷಯ: ಹೀರೋ ಮೋಟಾರ್ಸ್ ಕಂಪನಿಯನ್ನು ಧಾರವಾಡದಲ್ಲಿ ಸ್ಥಾಪನೆ ಮಾಡುವ ಬಗ್ಗೆ

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ–ಧಾರವಾಡ): ಮಾನ್ಯ ಅಧ್ಯಕ್ಷರೆ, ಇವತ್ತು ಪತ್ರಿಕೆಯಲ್ಲಿ ಹೀರೋ ಮೋಟಾರ್ಸ್ ಸೀಮಾಂಧ್ರ ಪಾಲು ಎಂದು ಬಂದಿದೆ. ಇದರ ಬಗ್ಗೆ ಒಂಬತ್ತು ತಿಂಗಳು ರಾಜ್ಯ ಸರ್ಕಾರ ನಿರ್ಣಯ ಕೈಗೊಳ್ಳಬೇಕಾಗಿತ್ತು. ಆದರೆ ಮಾನ್ಯ ಮುಖ್ಯಮಂತ್ರಿಗಳು ನಿರಾಸಕ್ತಿ ಹೊಂದಿರುವುದರಿಂದ ಈ ಹೀರೋ ಮೋಟಾರ್ಸ್ ಎನ್ನುವ ಕಂಪನಿ ಇವತ್ತು ಧಾರವಾಡಕ್ಕೆ ಬರಬೇಕಾಗಿರುವುದು ಸೀಮಾಂಧ್ರಕ್ಕೆ ಹೋಗುತ್ತಿದೆ ಎನ್ನುವುದು ವಿಜಯವಾಣಿ ಪತ್ರಿಕೆಯಲ್ಲಿ ಬಂದಿದೆ. ಈಗಾಗಲೇ ಹೀರೋ ಮೋಟಾರ್ಸ್ ಛೇರ್‌ಮನ್ ರಾಜ್ಯ ಸರ್ಕಾರಕ್ಕೆ proposal ಕೊಟ್ಟು ಒಪ್ಪಿಗೆ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಗಮನಿಸಬೇಕು. ಇದು 15 ರಿಂದ 20 ಸಾವಿರ ಜನರಿಗೆ ಉದ್ಯೋಗ ಕೊಡುವಂತಹ ಒಂದು ಇಂಡಸ್ಟ್ರಿ. ಈಗಾಗಲೇ ಹುಬ್ಬಳ್ಳಿ–ಧಾರವಾಡದಲ್ಲಿ ಕೆಐಎಡಿಬಿಯವದು ಮಮ್ಮಿಗಟ್ಟಿ ಹತ್ತಿರ 500 ಎಕರೆ ಜಮೀನಿದೆ. ಇವರು 200 ಎಕರೆ ಕೇಳಿದ್ದಾರೆ, ಅದನ್ನು ನೀವು acquire ಮಾಡಬಹುದು. 100 ಎಕರೆ